## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪೊಲೀಸ್ ಇಲಾಖೆಯ ನಿಸ್ತಂತು ಸಂಪರ್ಕ ಜಾಲದ 2020-21ನೇ ಸಾಲಿನ ವಾರ್ಷಿಕ ಸ್ಪೆಕ್ಟ್ರಂ ಶುಲ್ಕ ರೂ.4,54,39,315/- ಗಳನ್ನು ಮಂಜೂರು ಮಾಡುವ ಬಗ್ಗೆ-ಆದೇಶ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ ಹೆಚ್ ಡಿ 43 ಇಎಫ್‌ಎಸ್ 2019, ದಿನಾಂಕ 04.10.2019.
2. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪತ್ರ ಸಂಖ್ಯೆ: ಸಂಗ್ರಹ-2(2)19/2018-19 ದಿನಾಂಕ: 29.02.2019.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಆದೇಶದಲ್ಲಿ, ರಾಜ್ಯ ಪೊಲೀಸ್ ಇಲಾಖೆಯ 17 ಸಂಖ್ಯೆ (13 ಸಂಖ್ಯೆ ಯುಹೆಚ್‌ಎಫ್ +4 ಸಂಖ್ಯೆ ವಿಹೆಚ್‌ಎಫ್ ಡಿಜಿಟಲ್ ನಿಸ್ತಂತು ಜಾಲ) ಮತ್ತು 15 ಹೊಸ ವಿಹೆಚ್‌ಎಫ್ ಡಿಜಿಟಲ್ ನಿಸ್ತಂತು ಜಾಲದ ವಾರ್ಷಿಕ ಸ್ಪೆಕ್ಟ್ರಮ್ ಚಾರ್ಜಸ್ ಶುಲ್ಕ ರೂ.1,65,10,569/- ಗಳನ್ನು ಮಂಜೂರಾತಿ ನೀಡಿ ಆದೇಶಿಸಲಾಗಿತ್ತು.

ಮೇಲೆ ಓದಲಾದ (2)ರ ಪತ್ರದಲ್ಲಿ, ಪ್ರಸ್ತುತ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಉಪಯೋಗಿಸುತ್ತಿರುವ 03 HF, 60 VHF & 19 UHF ಅನಲಾಗ್ ನಿಸ್ತಂತು ಜಾಲಗಳಿಗೆ ಪ್ರತಿ ವರ್ಷ ಮಾರ್ಚ್ ತಿಂಗಳಲ್ಲಿ ವಾರ್ಷಿಕ ಸ್ಪೆಕ್ಟ್ರಂ ಶುಲ್ಕವನ್ನು ಸಂದಾಯ ಮಾಡಬೇಕಿದ್ದು, 17 ಸಂಖ್ಯೆ (13 ಸಂಖ್ಯೆ ಯುಹೆಚ್‌ಎಫ್ + 4 ವಿಹೆಚ್‌ಎಫ್ ನಿಸ್ತಂತು ಜಾಲಗಳಿಗೆ ಜುಲೈ ತಿಂಗಳಿನಲ್ಲಿ ಹಾಗೂ 15 ಸಂಖ್ಯೆ ವಿಹೆಚ್‌ಎಫ್ ಡಿಜಿಟಲ್ ನಿಸ್ತಂತು ಸಂಪರ್ಕ ಜಾಲಗಳಿಗೆ ಅಕ್ಟೋಬರ್ ತಿಂಗಳಿನಲ್ಲಿ 2020-21ನೇ ಸಾಲಿನ ಫ್ರೀಕ್ವೆನ್ಸಿಗಳಿಗೆ ಲೈಸೆನ್ಸ್ ಮತ್ತು ರಾಯಲ್ಟಿ ಮೊತ್ತಗಳ ವಾರ್ಷಿಕ ಸ್ಪೆಕ್ಟ್ರಮ್ ಶುಲ್ಕವನ್ನು ಪಾವತಿ ಮಾಡಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ.

Govt. of India, Ministry of Communications, DOT, WPC wing, New Delhi ರವರ ಪತ್ರ ಸಂ. No.L-14020/01/2011-WF, ದಿನಾಂಕ 18.12.2019ರ ಪತ್ರದಲ್ಲಿ Wireless Planning & Co-ordination Wing, Ministry of Communications, Government of India, New Delhi ರವರು 17 ಸಂಖ್ಯೆ (13 ಸಂಖ್ಯೆ ಯುಹೆಚ್‌ಎಫ್ + 4 ವಿಹೆಚ್‌ಎಫ್ Digital Wireless Networks) ಮತ್ತು 15 ಸಂಖ್ಯೆ ವಿಹೆಚ್‌ಎಫ್ ಡಿಜಿಟಲ್ ನಿಸ್ತಂತು ಜಾಲಗಳ ಫ್ರೀಕ್ವೆನ್ಸಿಗಳಿಗೆ ಲೈಸೆನ್ಸ್ ಫೀ ಮತ್ತು ರಾಯಲ್ಟಿ ಮೊತ್ತ ರೂ.1,65,10,569/- ಗಳನ್ನು ದಿನಾಂಕ 14.11.2019 ರಂದು ಸಂದಾಯವಾಗಿರುತ್ತದೆ. ವಿಳಂಬವಾಗಿ ಸ್ಪೆಕ್ಟ್ರಂ ಶುಲ್ಕ ಸಂದಾಯವಾಗಿರುವುದರಿಂದ ರೂ.12,72,396/- ಗಳ late fee ಅನ್ನು ವಿಧಿಸಿರುತ್ತಾರೆ.

ಸದರಿ ವಾರ್ಷಿಕ ಸ್ಪೆಕ್ಟ್ರಂ ಶುಲ್ಕ ಮತ್ತು ವಿಧಿಸಿರುವ late fee ಅನ್ನು WPC, New Delhi ರವರಿಗೆ ಸಂದಾಯ ಮಾಡಬೇಕಾಗಿರುವ ಮೊತ್ತದ ವಿವರ ಈ ಕೆಳಕಂಡಂತಿದೆ.

Scanned with CamScanner

| ಕ್ರ.ಸಂ | ಸಂಪರ್ಕ ಜಾಲಗಳು | ವಾರ್ಷಿಕ ಸ್ಪೆಕ್ಟ್ರಮ್ ಶುಲ್ಕ |
|---|---|---|
| 1 | 3-ಹೆಚ್‌ಎಫ್ & 60-ವಿಹೆಚ್‌ಎಫ್ ಅನಲಾಗ್ ನಿಸ್ತಂತು ಜಾಲ | 2,49,07,600 |
| 2 | 19-ಯುಹೆಚ್‌ಎಫ್ ಅನಲಾಗ್ ನಿಸ್ತಂತು ಜಾಲ | 27,45,050 |
| 3 | 17 ಸಂಖ್ಯೆ ಡಿಜಿಟಲ್ ನಿಸ್ತಂತು ಜಾಲ (13 ಯುಹೆಚ್‌ಎಫ್ + 4 ವಿಹೆಚ್‌ಎಫ್) | 1,57,03,069 |
| 4 | 15 ವಿಹೆಚ್‌ಎಫ್ ಡಿಜಿಟಲ್ ನಿಸ್ತಂತು ಜಾಲ | 8,11,200 |
| 5 | 17 ಸಂಖ್ಯೆ ಡಿಜಿಟಲ್ ನಿಸ್ತಂತು ಜಾಲ late fee (13 ಯುಹೆಚ್‌ಎಫ್+4 ವಿಹೆಚ್‌ಎಫ್) ದಿ:01.08.2019 ರಿಂದ ದಿ: 31.11.2019 - 4 ತಿಂಗಳು | 12,56,246 |
| 6 | 15 ವಿಹೆಚ್‌ಎಫ್ ಡಿಜಿಟಲ್ ನಿಸ್ತಂತು ಜಾಲ late fee ದಿ:01.10.2019 ರಿಂದ ದಿ: 31.11.2019 - 1 ತಿಂಗಳು | 16,150 |
| | ಒಟ್ಟು | **4,54,39,315** |

ನಿಸ್ತಂತು ಉಪಕರಣಗಳನ್ನು ಉಪಯೋಗಿಸಲು Wireless Planning & Co-Ordination Wing, Ministry of Communications, Government of India, New Delhi ರವರಿಗೆ ನಿಗಧಿತ ಅವಧಿಯೊಳಗೆ ಸದರಿ ಮೊತ್ತವನ್ನು ಪಾವತಿಸದಿದ್ದಲ್ಲಿ ತಿಂಗಳಿಗೆ ಶೇ.2% ರಂತೆ late fee ಅನ್ನು ಪಾವತಿ ಮಾಡಬೇಕಾಗಿರುತ್ತದೆ.

ಆದ್ದರಿಂದ 2020-21ನೇ ಸಾಲಿಗೆ ನಿಸ್ತಂತು ಸಂಪರ್ಕ ಜಾಲಗಳ ವಾರ್ಷಿಕ ಸ್ಪೆಕ್ಟ್ರಂ ಶುಲ್ಕ ಮತ್ತು late fee ಸೇರಿ ಒಟ್ಟು ರೂ.4,54,39,315/- ಗಳನ್ನು Wireless Planning & Co-Ordination Wing, New Delhi ರವರಿಗೆ ಪಾವತಿಸಲು ಲೆಕ್ಕಶೀರ್ಷಿಕೆ ``2055-00-109-1-01-051 ಸಾಮಾನ್ಯ ವೆಚ್ಚಗಳು" ಅಡಿಯಲ್ಲಿ ಭರಿಸಲು ಸರ್ಕಾರದಿಂದ ಅನುದಾನ ಬಿಡುಗಡೆ ಮಂಜೂರಾತಿ ಆದೇಶ ನೀಡುವಂತೆ ಕೋರಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರ ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 43 ಇಎಫ್‌ಎಸ್ 2019, ಬೆಂಗಳೂರು,**

**ದಿನಾಂಕ: 20/ಮಾರ್ಚ್/2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2020-21ನೇ ಸಾಲಿಗೆ ನಿಸ್ತಂತು ಸಂಪರ್ಕ ಜಾಲಗಳ ವಾರ್ಷಿಕ ಸ್ಪೆಕ್ಟ್ರಂ ಶುಲ್ಕ ಮತ್ತು late fee ಸೇರಿ ಒಟ್ಟು ರೂ.4,54,39,315/- ಗಳನ್ನು (ನಾಲ್ಕು ಕೋಟಿ ಐವತ್ತನಾಲ್ಕು ಲಕ್ಷ ಮೂವತ್ತೊಂಬತ್ತು ಸಾವಿರದ ಮೂರು ನೂರ ಹದಿನೈದು ರೂಪಾಯಿ ಮಾತ್ರ) ಗಳನ್ನು Wireless Planning & Co-Ordination Wing, New Delhi ರವರಿಗೆ ಪಾವತಿಸಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ.

ಈ ವೆಚ್ಚವನ್ನು 2019-20ನೇ ಸಾಲಿನ ಲೆಕ್ಕ ಶೀರ್ಷಿಕೆ 2055-00-109-1-01-051 "ಸಾಮಾನ್ಯ ವೆಚ್ಚಗಳು" ಅಡಿಯಲ್ಲಿ ಲಭ್ಯವಿರುವ ಅನುದಾನದಿಂದ ಭರಿಸತಕ್ಕದ್ದು.

-3

Scanned with CamScanner

ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2019, ದಿನಾಂಕ 04/07/2019ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ವಿತ್ತಾಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

20/3/2020
[ಬಿ.ಎನ್.ದೇವರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

ಪ್ರತಿ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
2. ಮಹಾಲೇಖಪಾಲರು (ಇ & ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
3. ಮಹಾಲೇಖಪಾಲರು (ಎ&ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329 /5369, ಬೆಂಗಳೂರು-560 001.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನೃಪತುಂಗ ರಸ್ತೆ, ಬೆಂಗಳೂರು.
5. ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಸಿ.ಎಲ್ & ಎಂ. ಎಂ.ಜಿ.ರಸ್ತೆ, ಬೆಂಗಳೂರು.
6. ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಒಳಾಡಳಿತ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು.
7. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.
8. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-11), ವಿಧಾನಸೌಧ.
10. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಸಮನ್ವಯ), ವಿಧಾನಸೌಧ.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಹೊರಡಿಸಿದ ಒಳಾಡಳಿತ ಇಲಾಖೆ ಶಾಖೆ
ಸ್ವೀಕೃತಿ ಮತ್ತು ರವಾನೆ
ಕರ್ನಾಟಕ ಸರ್ಕಾರದ ಸಚಿವಾಲಯ

06/05